ಶ್ರೀ ಜಗದೀಶ್ ಶೆಟ್ಟರ್: ಪ್ರಕಾಶ್ ಹುಕ್ಕೇರಿಯವರೆ, ಎರಡು ಸಲ signature ಮಾಡುವುದರಲ್ಲಿ ತಪ್ಪೇನಿದೆ? ಅದರಲ್ಲಿ ತೊಂದರೆಯೇನಿದೆ? ಹೇಗಿದ್ದರೂ ಬೆಳಗ್ಗೆ ಒಂದು ಸಲ sign ಮಾಡುವುದು ಇದ್ದೇ ಇದೆಯಲ್ಲ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ: ತಾವೂ ಅಧ್ಯಕ್ಷರಾಗಿ ಕೆಲಸ ಮಾಡಿದ್ದೀರಿ. ಇದರ ಬಗ್ಗೆ ನಮ್ಮದೇನೂ ತಕರಾರಿಲ್ಲ, ತಾವೂ ವಿಚಾರ ಮಾಡಿ.

ಅಧ್ಯಕ್ಷರು: ಆಯಿತು.

ಶ್ರೀ ಹೆಚ್.ಡಿ.ರೇವಣ್ಣ : ಮಾಡೋಣ ಎಂದು ಹೇಳಿದ್ದಾರೆ.

4. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ:

ವಿಷಯ: ನಿತ್ಯಾನಂದ ಸ್ವಾಮೀಜಿಯ ಲೈಂಗಿಕ ಹಗರಣದ ಬಗ್ಗೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ನಿಮ್ಮ ಅನುಮತಿ ಪಡೆದು ಒಂದು ವಿಚಾರವನ್ನು ಪ್ರಸ್ತಾಪ ಮಾಡುತ್ತೇನೆ. ನಿನ್ನೆ ಬಾಲಕೃಷ್ಣರವರು ಇದನ್ನು ಪ್ರಸ್ತಾಪ ಮಾಡಿದರು. ಗೃಹ ಸಚಿವರು ಈಗ ಇಲ್ಲೇ ಇದ್ದಾರೆ. ಇವತ್ತು ಎಲ್ಲಾ ಪತ್ರಿಕೆಗಳಲ್ಲೂ ಮುಖಪುಟದಲ್ಲಿ ಬಂದಿದೆ.

ಅಧ್ಯಕ್ಷರು : ಇವತ್ತು ವರದಿ ಕೊಡುತ್ತೇವೆ ಎಂದು ಸರ್ಕಾರದವರು ನಿನ್ನೆ ಹೇಳಿದ್ದರು.

ಶ್ರೀ ಸಿದ್ದರಾಮಯ್ಯ : ನಿತ್ಯಾನಂದ ಎನ್ನುವ ಒಬ್ಬ ಸ್ವಾಮೀಜಿ, ನಿತ್ಯಾನಂದ ಎಂದು ಹೆಸರನ್ನು ಮಾತ್ರ ಚೆನ್ನಾಗಿ ಇಟ್ಟುಕೊಂಡಿದ್ದಾರೆ. ನಿತ್ಯ + ಆನಂದ = ನಿತ್ಯಾನಂದ, ಸವರ್ಣದೀರ್ಘಸಂಧಿ. ಅವನು ಹೆಸರಿಗೆ ತಕ್ಕ ಹಾಗೆ ಆನಂದವನ್ನು ಅನುಭವಿಸುತ್ತಿದ್ದಾನೆ. ಅವರ ರಾಸಲೀಲೆಗಳೆಲ್ಲಾ, ಫೋಟೋ ಸಮೇತವಾಗಿ T.V.ಗಳಲ್ಲಿ, ಪತ್ರಿಕೆಗಳಲ್ಲೆಲ್ಲ ಬಂದಿದೆ. ಅವರು ಕಾವಿ ಬಟ್ಟೆ ಹಾಕಿಕೊಂಡು ಈ ರೀತಿ ಮಾಡಿದ್ದಾರೆ. ಆ ಫೋಟೋಗಳು ಬಹಳ ಅಶ್ಲೀಲವಾಗಿವೆ, ಅಸಹ್ಯವಾಗಿವೆ. ಬಚ್ಚೇಗೌಡರೇ, ಅದನ್ನು ನೋಡಿರುವಿರೇನು?

ಶ್ರೀ ಬಿ.ಎನ್.ಬಚ್ಚೇಗೌಡ : ನಾನು ನೋಡಲಿಲ್ಲ. ನನ್ನ ಹೆಸರನ್ನು ಹೇಳಬೇಡಿ.

ಶ್ರೀ ಸಿದ್ದರಾಮಯ್ಯ : ಪತ್ರಿಕೆಯಲ್ಲಿ ನೋಡಿದಿರಾ ಎಂದು ಕೇಳಿದೆ. ಪತ್ರಿಕೆಯಲ್ಲಿ ನಾನು ಓದಿದೆ. ಪತ್ರಿಕೆ ತೆಗೆದ ತಕ್ಷಣ front pageನಲ್ಲಿರುವುದನ್ನು ನೀವ್ಯಾರೂ ಓದಿಲ್ಲವೇ? ನೋಡಿಲ್ಲವೇ?

ಶ್ರೀ ಸಿ.ಸಿ.ಪಾಟೀಲ್: ಬಚ್ಚೇಗೌಡರನ್ನೇ ಏಕೆ ಕೇಳಿದಿರಿ ನೀವು?

ಶ್ರೀ ಸಿದ್ದರಾಮಯ್ಯ: ನನ್ನ ಅವರ ಸ್ನೇಹದಿಂದ ಕೇಳಿದೆ. ಕೇಳುವುದು ಬೇಡ ಎಂದರೆ, ಬೇಡ ಬಿಡಿ. ನಮ್ಮ ಸ್ನೇಹ ಇದೆಯೋ, ಇಲ್ಲವೋ ಹೇಳಿ.

ಶ್ರೀ ಬಿ.ಎನ್.ಬಚ್ಚೇಗೌಡ: ಇದೆ.

ಶ್ರೀ ಸಿದ್ದರಾಮಯ್ಯ: ಹಾಗಿದ್ದರೆ ಕುಳಿತುಕೊಳ್ಳಿ.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ: ಎಲ್ಲರೂ ನೋಡಿದ್ದೀರಾ ಎಂದು ಕೇಳಿದಿರಿ.

ಶ್ರೀ ಸಿದ್ದರಾಮಯ್ಯ: ಎಲ್ಲರೂ ಎಂದು ನಾನು ಹೇಳಿದೆನೇ? ಎಲ್ಲರೂ ಎಂದು ನಾನೆಲ್ಲಿ ಹೇಳಿದೆ ಶಂಕರಲಿಂಗೇಗೌಡರೇ? ನಿತ್ಯಾನಂದ ಎಂದು ನಾನು ಹೇಳಿದೆ. ನಾನೇನು ಶಂಕರಲಿಂಗೇಗೌಡ ಎಂದು ಹೇಳಿದೆನೇ?

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ: ಅವನು ಅಂತರಂಗದಲ್ಲಿ ಹರಿಶ್ಚಂದ್ರ, ಬಹಿರಂಗದಲ್ಲಿ ಕಾಮಚಂದ್ರ.

ಶ್ರೀ ಆರ್. ರೋಷನ್ ಬೇಗ್: ಅವರು ನಿತ್ಯಾನಂದರೇ?

ಶ್ರೀ ಸಿದ್ದರಾಮಯ್ಯ: You are not Nityananda. Please, sit down.

ಅಧ್ಯಕ್ಷರು : ಆಯಿತು, ಕುಳಿತುಕೊಳ್ಳಿ.

ಶ್ರೀ ಸಿದ್ದರಾಮಯ್ಯ : ಶಂಕರಲಿಂಗೇಗೌಡರು ನನಗೆ ಚೆನ್ನಾಗಿ ಗೊತ್ತು, ಇವರೇನು ನಿತ್ಯಾನಂದ ಅಲ್ಲ. ಶಂಕರಲಿಂಗೇಗೌಡರು ನನಗೆ student days ನಿಂದಲೂ ಗೊತ್ತು, ಇವರು ಯಾವತ್ತೂ ನಿತ್ಯಾನಂದ ಅಲ್ಲ, ನಾನು ಮೈಸೂರಿನಲ್ಲಿ ನೋಡಿದ್ದೇನೆ. ನಮ್ಮ ಆಸಾಮಿನೇ ಅವರು.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ: ಹೊರಗೆ ಹರಿಶ್ಚಂದ್ರ, ಒಳಗೆ ಕಾಮಚಂದ್ರ ಎಂದು ಹೇಳಿ ಎಂದು ಇವರು ಹೇಳುತ್ತಿದ್ದಾರೆ.

ಶ್ರೀ ಎಸ್. ಸುರೇಶ್‌ಕುಮಾರ್: ಅದು ಸತ್ಯ.

ಶ್ರೀ ಸಿದ್ದರಾಮಯ್ಯ: ಹರಿಶ್ಚಂದ್ರ ಹಾಗೆ ಇದ್ದರೇ?

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ : ಹರಿಶ್ಚಂದ್ರ ಅಲ್ಲ, ನೀವು ಹೇಳುತ್ತಿರುವ ನಿತ್ಯಾನಂದ ಹಾಗಿದ್ದರು.

ಶ್ರೀ ಸಿದ್ದರಾಮಯ್ಯ: ಏಕೋ ನೀವು ಪದೇಪದೇ ಏಳುವುದನ್ನು ನೋಡಿದರೆ, ನಿಮ್ಮ ಮೇಲೆ ಅನುಮಾನ ಶುರುವಾಗಿಬಿಡುತ್ತದೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ: ದೇವಾನುದೇವತೆಗಳು ಮಾಡಿದ್ದಾರೆ. ಸೃಷ್ಟಿಕರ್ತನಾದ ಬ್ರಹ್ಮನು ಸರಸ್ವತಿಯನ್ನು ಸೃಷ್ಟಿ ಮಾಡಿದ, ನಂತರ ಮದುವೆ ಮಾಡಿಕೊಂಡ, ಬೆಳದಿಂಗಳನ್ನು ಕೊಡುತ್ತಿರುವಂಥ ಚಂದ್ರ, ಗುರುವಿನ ಹೆಂಡತಿ ಸ್ನಾನ ಮಾಡಿಕೊಂಡು ಬರುತ್ತಿರುವಾಗ ಒದ್ದೆಯಾಗಿರತಕ್ಕಂಥ ದೇಹವನ್ನು ನೋಡಿ ಆಕರ್ಷಿತನಾಗಿ ಅವಳನ್ನು ಜೊತೆಗೆ ಇಟ್ಟುಕೊಂಡು ಬುಧ ಹುಟ್ಟಿದ. ಸ್ವರ್ಗಾಧಿಪತಿಯಾದ ದೇವೇಂದ್ರ ರಂಭೆ, ಊರ್ವಶಿ, ಮೇನಕೆ, ತಿಲೋತ್ತಮೆ, ಈ ನಾಲ್ಕು ಜನರಿದ್ದರೂ ಕೂಡ ಗೌತಮಿ ಋಷಿಯ ಪತ್ನಿಯಾದ ಅಹಲ್ಯಾದೇವಿಯಲ್ಲಿ ಮೋಹಿತನಾಗಿ, ಅರ್ಧರಾತ್ರಿಯಲ್ಲಿ ಕೋಳಿಯಾಗಿ ಹೋಗಿ ಅವಳ ಜೊತೆ ಸಂಬಂಧ ಬೆಳೆಸಿದ. ಹೀಗೆ ದೇವಾನುದೇವತೆಗಳೂ ಮಾಡಿದ್ದಾರೆ ಬಿಡಿ.

ಶ್ರೀ ಸಿದ್ದರಾಮಯ್ಯ: ಶಂಕರಲಿಂಗೇಗೌಡ ಶ್ರೀರಾಮನ ವಂಶದವನೋ, ಶ್ರೀಕೃಷ್ಣನ ವಂಶದವನೋ ನನಗೆ ಗೊತ್ತಾಗುತ್ತಿಲ್ಲ. ಏಕೆಂದರೆ, ಶ್ರೀರಾಮ ಏಕಪತ್ನಿ ವ್ರತಸ್ಥ. ಅದಕ್ಕೇ, ನೀನು ಯಾವ ವಂಶದವನು, ಶ್ರೀರಾಮನ ವಂಶದವನೋ, ಶ್ರೀಕೃಷ್ಣನ ವಂಶದವನೋ ಎಂದು ಹೇಳಬೇಕು.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ: ಶ್ರೀಕೃಷ್ಣನಿಗೆ 16,000 ಜನ ಹೆಂಡತಿಯರು. ಶ್ರೀರಾಮ ಏಕಪತ್ನಿ ವ್ರತಸ್ಥ. ನೀವು ಶ್ರೀರಾಮನ ಬಗ್ಗೆ ಹೇಳಬೇಡಿ. ಆದರೆ ನೀವು ಕೃಷ್ಣ ಆಗಬೇಡಿ.

ಶ್ರೀ ಸಿದ್ದರಾಮಯ್ಯ: ನಿತ್ಯಾನಂದ ಸ್ವಾಮೀಜಿ ಎನ್ನುವವರು ಬಿಡದಿ ಹತ್ತಿರ ಒಂದು ಮಠ ಮಾಡಿಕೊಂಡಿದ್ದು, ವಿದೇಶಗಳಲ್ಲೆಲ್ಲ ಇವರ ಶಾಖೆಗಳಿವೆಯಂತೆ. ಕೋಟಿಗಟ್ಟಳೆ ಹಣವನ್ನು ಅಕ್ರಮವಾಗಿ ಸಂಪಾದನೆ

ಮಾಡಿದ್ದಾರೆ. ಈ ರೀತಿ illegal wayನಲ್ಲಿ ಬಹಳಷ್ಟು ill-gotten money, ಮಾಡಿಕೊಂಡಿದ್ದಾರೆ. ಅದನ್ನು ಉಪಯೋಗಿಸಿಕೊಂಡು, ಸಿನಿಮಾ ತಾರೆಯರು ಮತ್ತು ಬೇರೆಬೇರೆ ಹುಡುಗಿಯರ ಜೊತೆ ರಾಸಲೀಲೆ ಆಡುತ್ತಿದ್ದಾನೆ. ಜನರು ಇವರ ಕಾಲಿಗೆ ನಮಸ್ಕಾರ ಮಾಡುತ್ತಾರೆ. ಪತ್ರಿಕೆಗಳಲ್ಲಿ ಬಂದಿರುವುದು ಸತ್ಯವಾದರೆ ಇಂಥ ಲಫಂಗರನ್ನು, ಅವರನ್ನು ಯಾವ ಭಾಷೆಯಲ್ಲಿ ಕರೆದರೂ ಅದು ಕಡಿಮೆಯೇ, ಯಾವ ಪದಗಳನ್ನು ಪ್ರಯೋಗ ಮಾಡಿದರೂ ಅದು ಕಡಿಮೆಯೇ. ಪತ್ರಿಕೆಗಳಲ್ಲಿ ಬಹಳ ದೊಡ್ಡದಾಗಿ ಬಂದಿದೆ. ಇದು ಸಮಾಜ ದೃಷ್ಟಿಯಿಂದ ಬಹಳ ಕೆಟ್ಟದಾಗುತ್ತದೆ. ಇವರ ಹೆಸರನ್ನು ದೇಶ ವಿದೇಶಗಳಲ್ಲಿ ನೋಡಿದರೆ, ನಮ್ಮ ಭಾರತೀಯ ಸಂಸ್ಕೃತಿ ಏನಾಗುತ್ತದೆ? ಬಿ.ಜೆ.ಪಿ.ಯವರು ಸಂಸ್ಕೃತಿಯ ಬಗ್ಗೆ ಬಹಳ ಮಾತನಾಡುತ್ತಾರೆ. ಇದು ಯಾವ ಸಂಸ್ಕೃತಿಯೆಂದು ತೀರ್ಮಾನ ಮಾಡಬೇಕು. ದಯಮಾಡಿ ಅವರು ಸಿಕ್ಕರೆ ಕೂಡಲೇ arrest ಮಾಡಬೇಕು. ಅವರ ಎಲ್ಲಾ ಆಸ್ತಿಯನ್ನು ಸರ್ಕಾರ ಮುಟ್ಟುಗೋಲು ಹಾಕಿಕೊಳ್ಳಬೇಕು. ಅವರನ್ನು ಹಿಡಿದು ಜೈಲಿಗೆ ಕಳುಹಿಸುವಂಥ ಕೆಲಸವನ್ನು ಮಾಡಬೇಕು. ನಾವೆಲ್ಲರೂ ಭಾರತೀಯರಾಗಿ ತಲೆ ತಗ್ಗಿಸಬೇಕಾದಂಥದ್ದು because ನಮ್ಮಲ್ಲಿ ಏನು ಹೇಳುತ್ತೇವೆಂದರೆ.. ..

ಡಾ: ವಿ.ಎಸ್.ಆಚಾರ್ಯ: ಮಾನ್ಯ ಅಧ್ಯಕ್ಷರೆ, ನಿನ್ನೆ ಈ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ.

ಶ್ರೀ ಸಿದ್ದರಾಮಯ್ಯ: ಮಾನ್ಯ ಆಚಾರ್ಯರವರೆ, ಒಂದು ನಿಮಿಷ ಕುಳಿತುಕೊಳ್ಳಿ. ನಾನು ಮಾತನಾಡಬಾರದೆಂದು ಇದೆಯಾ?

ಡಾ: ವಿ.ಎಸ್.ಆಚಾರ್ಯ: ಹಾಗೇನು ಇಲ್ಲ.

ಶ್ರೀ ಸಿದ್ದರಾಮಯ್ಯ: ನಾನು ಅಧ್ಯಕ್ಷರ ಅನುಮತಿಯನ್ನು ತೆಗೆದುಕೊಂಡು ಪ್ರಸ್ತಾಪ ಮಾಡುತ್ತಿದ್ದೇನೆ. ಭಾರತದೇಶದಲ್ಲಿ ಕಾವಿ ಬಟ್ಟೆಗೆ ಬಹಳ ಮರ್ಯಾದೆ ಇದೆ, ಈ ಬಟ್ಟೆಯನ್ನು ಹಾಕಿಕೊಂಡಿರುವ ಜನರಿಗೆ ಬಹಳ ಗೌರವ ಕೊಡುತ್ತೇವೆ, ಬಹಳ ಮರ್ಯಾದೆಯನ್ನು ಕೊಡುತ್ತೇವೆ. ಇಂಥ ಒಬ್ಬಿಬ್ಬರಿಂದ ಸಮಾಜದಲ್ಲಿ ಬಹಳ ಕೆಟ್ಟದಾಗುತ್ತದೆ. ಇಂಥ ಅನೇಕ ಜನರಿದ್ದಾರೆ, ಇವರನ್ನು ಗೋಮುಖ ವ್ಯಾಘ್ರ ಎಂದು ಕರೆಯುವುದು.

ಇವರು ಮನುಷ್ಯತ್ವವಿಲ್ಲದೇ ಇರುವವರು, ಯಾವುದೇ ನೀತಿ ನಿಯಮವಿಲ್ಲದೇ ಇರುವವರು, ಮೌಲ್ಯಗಳಿಲ್ಲದೇ ಇರತಕ್ಕಂಥವರು, ಇವರಿಗೆ morality ಇರುವುದಿಲ್ಲ. ಆದುದರಿಂದ ಗೃಹ ಸಚಿವರು ಕೂಡಲೇ ಇವರ ಆಸ್ತಿಯನ್ನೆಲ್ಲಾ ಮುಟ್ಟುಗೋಲು ಹಾಕಿಕೊಳ್ಳಬೇಕು. ಇವರ ಮೇಲೆ ಕ್ರಿಮಿನಲ್ ಮೊಕದ್ದಮೆಯನ್ನು ಹಾಕಬೇಕು. ಇವರನ್ನು arrest ಮಾಡಬೇಕು, ಇವೆಲ್ಲಾ non-bailable offenceಗಳು, ಇವರನ್ನು ಜೈಲಿಗೆ ಕಳುಹಿಸುವಂಥ ಕೆಲಸವನ್ನು ಕೂಡಲೇ ಮಾಡಬೇಕು. ಆಗ ಸರ್ಕಾರಕ್ಕೂ ಮರ್ಯಾದೆ ಬರುತ್ತದೆ, ನಮಗೂ ಸಮಾಜದಲ್ಲಿ ತಲೆ ಎತ್ತಿಕೊಂಡು ತಿರುಗಾಡುವುದಕ್ಕೆ ಸಾಧ್ಯವಾಗುತ್ತದೆ. ಸರ್ಕಾರ ಇಂಥವರ ಮೇಲೆ ಕಠಿಣವಾದಂಥ ಕ್ರಮ ತೆಗೆದುಕೊಳ್ಳುತ್ತದೆಂದು ಬೇರೆಯವರಿಗೂ message ಹೋಗಬೇಕು. ತಾವು ಆ ಕೆಲಸವನ್ನು ದಯವಿಟ್ಟು ಮಾಡಬೇಕು. ಈ ಬಗ್ಗೆ ನಿನ್ನೆ ಹೇಳಿಕೆಯನ್ನು ಕೊಡುತ್ತೇವೆಂದು ಹೇಳಿದ್ದರು. ಮಾನ್ಯ ಮಂತ್ರಿಯವರು ದಯವಿಟ್ಟು ಆದರ ಬಗ್ಗೆ ಉತ್ತರವನ್ನು ಕೊಡಬೇಕು.

ಡಾ: ವಿ.ಎಸ್. ಆಚಾರ್ಯ (ಗೃಹ ಸಚಿವರು): ಮಾನ್ಯ ಅಧ್ಯಕ್ಷರೆ, ನಿನ್ನೆ ದಿವಸ ಮಾನ್ಯ ಹೆಚ್.ಸಿ.ಬಾಲಕೃಷ್ಣರವರು ವಿಷಯವನ್ನು ಪ್ರಸ್ತಾಪ ಮಾಡಿದ್ದರು. ಇವತ್ತು ಅದಕ್ಕೆ ಪೂರಕವಾಗಿ ಪ್ರತಿ ಪಕ್ಷದ ನಾಯಕರಾದ ಶ್ರೀ ಸಿದ್ದರಾಮಯ್ಯನವರು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಮೂಲತ: ತಮಿಳುನಾಡಿನ ತಿರುವಣ್ಣಾಮಲೈ ಹತ್ತಿರ ಹುಟ್ಟಿದ ರಾಜಶೇಖರ್ ಎನ್ನುವವನು ಕ್ರಮೇಣ ಇವನು ನಿತ್ಯಾನಂದ ಸ್ವಾಮೀಜಿ ಎಂದು ಹೇಳಿಕೊಂಡಿದ್ದಾನೆ. ಇವನ ಮುಖ್ಯ ಆಶ್ರಮ ತಮಿಳುನಾಡಿನಲ್ಲಿದೆ. ಬೇರೆ ಬೇರೆ ಕಡೆಗಳಲ್ಲಿ ಒಟ್ಟು 13 ಕಡೆಗಳಲ್ಲಿ ಆಶ್ರಮ ಮಾಡಿದ್ದಾರೆಂದು ತಿಳಿದುಕೊಂಡಿದ್ದೇನೆ. ನಮ್ಮ ರಾಜ್ಯದ ರಾಮನಗರ ಜಿಲ್ಲೆಯ ಬಿಡದಿಯಲ್ಲೂ ಒಂದು ಆಶ್ರಮವನ್ನು ಕಟ್ಟಿಕೊಂಡು ಕೆಲವು ಚಟುವಟಿಕೆಗಳನ್ನು ಮಾಡುತ್ತಿದ್ದರು. ಇಲ್ಲಿ ಬಹುತೇಕ ವಿದೇಶಿ ಭಕ್ತರಿಗೆ ಪ್ರವೇಶವಿದ್ದು, ವರ್ಷದ ಜನವರಿ ತಿಂಗಳಲ್ಲಿ ಮೂರು ದಿವಸ ಇಲ್ಲಿಯ ಜನರಿಗೆ ಪ್ರವೇಶಕ್ಕೆ ಅವಕಾಶ ಕೊಡುತ್ತಿದ್ದರೆಂದು ತಿಳಿದು ಬಂದಿದೆ. ಇಂಥ ಸ್ಥಿತಿಯಲ್ಲಿ ಮೊನ್ನೆ ದಿವಸ

2ನೇ ತಾರೀಖಿನಂದು ರಾತ್ರಿ Sun Network T.V.ಯಲ್ಲಿ ಪ್ರಥಮ ಬಾರಿ ತಮಿಳುನಾಡಿನ ಕೆಲವು ಚಾನಲ್‌ಗಳಲ್ಲಿ ಇದು ತಮಿಳುನಾಡಿನ ಆಶ್ರಮದಲ್ಲಿ ಆಗಿರುವಂಥದ್ದು, ಇಲ್ಲಿರುವ ಆಶ್ರಮದಲ್ಲಿ ಅಲ್ಲ. ಅಲ್ಲಿ ರತಿಕ್ರೀಡೆಯಲ್ಲಿ ತೊಡಗಿದ್ದರು, ಅಶ್ಲೀಲ ಚಿತ್ರಗಳೆಲ್ಲಾ ಬರುವುದಕ್ಕೆ ಪ್ರಾರಂಭವಾಯಿತು. ನಿನ್ನೆ ಬೆಳಿಗ್ಗೆ ನಮ್ಮ ಕನ್ನಡದ ಕೆಲವು ಚಾನಲ್‌ಗಳಲ್ಲೂ ಬರಲು ಪ್ರಾರಂಭವಾಯಿತು. ಇದನ್ನು ತಿಳಿದಂಥ ಜನರು ರಾಮನಗರದ ಆಶ್ರಮಕ್ಕೆ ಹೋಗಿ ಗದ್ದಲ ಮಾಡುವುದಕ್ಕೆ ಕುತೂಹಲದಿಂದ ಜಮಾಯಿಸಿದ್ದರು. ಮೊನ್ನೆ ತಡ ರಾತ್ರಿಯಲ್ಲಿ KSRP ಯ ಸಣ್ಣ ತುಕಡಿಯನ್ನು ಅಲ್ಲಿ ಹಾಕಲಾಗಿತ್ತು, ನಿನ್ನೆಯೂ ಇತ್ತು. ಆದರೂ ನಿನ್ನೆ ಜನರು ಜಾಸ್ತಿ ಬಂದ ಕಾರಣದಿಂದ ಅಲ್ಲಿ ಕೆಲವು ಸಣ್ಣ ಪುಟ್ಟ ಘಟನೆಗಳು ಆಯಿತು. ಅಲ್ಲಿ ಗ್ಲಾಸ್‌ಗಳನ್ನು ಒಡೆದರು, ದಾರಿಯಲ್ಲಿ ಹಾಕಿದ್ದ ಕೆಲವು ಫ್ಲೆಕ್ಸಿ ಬೋರ್ಡ್‌ಗಳನ್ನು ಕಿತ್ತು ಹಾಕಿದರು, ಸುಟ್ಟು ಹಾಕಿದರು. ಸಂಜೆ ವೇಳೆಗೆ ಕುಟೀರಗಳಿಗೆ ಬೆಂಕಿ ಇಟ್ಟ ಪ್ರಕರಣಗಳು ವರದಿಯಾಗಿದೆ. ಇದೆಲ್ಲವನ್ನು ನಮ್ಮವರು ಗಮನಿಸಿದ್ದಾರೆ. ಈ ಮಧ್ಯೆ ಜಿಂಕೆ, ಹುಲಿ, ಚರ್ಮದ ಮೇಲೆ ಅವರು ಬಂದಾಗ ಕುಳಿತುಕೊಳ್ಳುತ್ತಿದ್ದರೆಂಬ ದೂರನ್ನು ಅನುಸರಿಸಿ, ನಮ್ಮ Forest Departmentನವರು ಸ್ಥಳಕ್ಕೆ ಹೋಗಿದ್ದರು. ಅಲ್ಲಿ ಅದು ಯಾವುದು ಸಿಕ್ಕಿಲ್ಲ, 26 ಕೆ.ಜಿ. ಗಂಧದ ಮರದ ತುಂಡುಗಳನ್ನು ಮಾಡಿ ಇಟ್ಟಿದ್ದಂಥ ಸಣ್ಣ ಸಣ್ಣ ಗಂಧದ ಕೊರಡುಗಳು ಸಿಕ್ಕಿದೆ. ಆಶ್ರಮದಲ್ಲಿದ್ದಂಥ ಗಂಧದ ಮರವನ್ನು ಕಳ್ಳರು ಯಾರೋ ಕದ್ದುಕೊಂಡು ಹೋಗಿದ್ದಾರೆಂದು ಹಿಂದೆ ಒಂದು ದೂರನ್ನು ಕೊಟ್ಟಿದ್ದರು. ಇಲ್ಲಿ ಸಿಕ್ಕಿರುವ 26 ಕೆ.ಜಿ.ಯ ಗಂಧದ ತುಂಡುಗಳನ್ನು ಮಹಜರು ಮಾಡಿ ವಶಪಡಿಸಿಕೊಂಡಿದ್ದಾರೆ. ನಿನ್ನೆ ಗದ್ದಲ ಮಾಡಿದವರ ಪೈಕಿ ಕೆಲವರನ್ನು ಬಂಧನ ಮಾಡಿದ್ದಾರೆ. ಈಗ ಸ್ವಾಮಿ ಎನಿಸಿಕೊಂಡಿರುವ ನಿತ್ಯಾನಂದ ತಲೆ ಮರೆಸಿಕೊಂಡಿದ್ದಾರೆ. ಇವರು ತಮಿಳುನಾಡಿನಲ್ಲೂ ಇಲ್ಲವೆಂಬ ವರ್ತಮಾನ ಇದೆ. ನಾವು ಅಗತ್ಯವಿದ್ದರೆ ತಮಿಳುನಾಡಿನ ಪೊಲೀಸರ ಸಂಪರ್ಕ ಇಟ್ಟುಕೊಂಡು, ಇಲ್ಲಿಯ ಆಶ್ರಮಕ್ಕೆ ಯಾರಾದರೂ ಬಂದದ್ದು ಇದ್ದರೆ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಸಿದ್ದರಾಮಯ್ಯ: You please take over the property, you take it back. Confiscate ಮಾಡಬೇಕು.

ಡಾ: ವಿ.ಎಸ್.ಆಚಾರ್ಯ: ಆ propertyಯ title ಬಗ್ಗೆ, ownership ಬಗ್ಗೆ ಒಂದು ಭಿನ್ನಾಬಿಪ್ರಾಯವಿದೆ.

ಶ್ರೀ ಸಿದ್ದರಾಮಯ್ಯ: Dispute ಏನಾದರೂ ಇರಲಿ, It is not the dispute between Government and swamiji. ಅವನು ಯಾರೋ ಸ್ವಾಮಿಯಲ್ಲ. You take over the property

ಡಾ: ವಿ.ಎಸ್.ಆಚಾರ್ಯ: It looks as if it is a Gomala land.

ಶ್ರೀ ಸಿದ್ದರಾಮಯ್ಯ: Government has got all the powers to take over property; you please take over the property.

ಶ್ರೀ ಆರ್.ರೋಷನ್‌ಬೇಗ್: ಅವರೇ gomala land ಎಂದು ಹೇಳುತ್ತಿದ್ದಾರೆ.

ಶ್ರೀ ಸಿದ್ದರಾಮಯ್ಯ: You take it back.

ಶ್ರೀ ಹೆಚ್.ಸಿ. ಬಾಲಕೃಷ್ಣ: ಮಾನ್ಯ ಅಧ್ಯಕ್ಷರೆ, ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಿ, ಆಮೇಲೆ ತೀರ್ಮಾನ ಮಾಡಲಿ, ಮುಟ್ಟುಗೋಲು ಹಾಕಿಕೊಳ್ಳುವುದನ್ನಾದರೂ ಸರ್ಕಾರ ಹೇಳಬೇಕಲ್ಲಿ.

ಡಾ: ವಿ.ಎಸ್.ಆಚಾರ್ಯ: ನಮ್ಮ ಜಾಗವಾದರೆ ನಾವು ಮುಟ್ಟುಗೋಲು ಹಾಕಿಕೊಳ್ಳಬಹುದು.

ಶ್ರೀ ಹೆಚ್.ಸಿ.ಬಾಲಕೃಷ್ಣ: ಅಲ್ಲಿ ಬೇರೆ ಬೇರೆ ವ್ಯಕ್ತಿಗಳು ಪ್ರವೇಶ ಮಾಡುವುದಕ್ಕೆ ಅವಕಾಶವಿದೆ.

ಶ್ರೀ ಸಿದ್ದರಾಮಯ್ಯ: There is no question of it. Let the Government take the possession of the land.

ಡಾ: ವಿ.ಎಸ್. ಆಚಾರ್ಯ : We will do that.

ಶ್ರೀ ಹೆಚ್.ಸಿ.ಬಾಲಕೃಷ್ಣ : ಮಾನ್ಯ ಅಧ್ಯಕ್ಷರೆ, ಅಲ್ಲಿ ಬೇರೆ ಬೇರೆ ವ್ಯಕ್ತಿಗಳು ಪ್ರವೇಶ ಮಾಡುವುದಕ್ಕೆ ಅವಕಾಶವಿದೆ. ದಯಮಾಡಿ ಸರ್ಕಾರ ಅದನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು.

ಡಾ: ವಿ.ಎಸ್.ಆಚಾರ್ಯ: ಮಾನ್ಯ ಅಧ್ಯಕ್ಷರೆ, ನಮ್ಮ ಇಲಾಖೆಯಿಂದ ವರ್ತಮಾನ ಬಂದಿದೆ. ಅದನ್ನು ನಾನು ತಿಳಿಸಿದ್ದೇನೆ, ಮಾನ್ಯ ಜಿಲ್ಲಾಧಿಕಾರಿಯವರಿಂದ ಮತ್ತು ತಮಿಳುನಾಡಿನಿಂದ ಕೆಲವು ಮಾಹಿತಿಗಳನ್ನು ಪಡೆದುಕೊಂಡ ನಂತರ ಅದಕ್ಕೆ ಬೇಕಾದಂಥ ಕ್ರಮವನ್ನು ನಾವು ತೆಗೆದುಕೊಳ್ಳುತ್ತೇವೆ. ಅತಿ ಬಿಗಿಯಾದಂಥ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

5. ಘನತೆವೆತ್ತ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾ ನಿರ್ಣಯದ ಮೇಲೆ ಮುಂದುವರೆದ ಚರ್ಚೆ:

ಅಧ್ಯಕ್ಷರು : ಮಾನ್ಯ ವಿರೋಧಪಕ್ಷದ ನಾಯಕರೆ, ಮಾತನಾಡಿ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, Chief Secretary ಯವರು ಈ ಸದನಕ್ಕೆ ಬರುವುದಿಲ್ಲ, ಯಾರು important Secretaryಗಳು ಇದ್ದಾರೆ, ಅವರೂ ಈ ಸಭೆಗೆ ಬರುವುದಿಲ್ಲ. ಇಲ್ಲಿ Governor address ಮೇಲೆ ಮಾತನಾಡುವಾಗ .. ..

ಶ್ರೀ ಆರ್. ರೋಷನ್‌ಬೇಗ್ : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು Governor's address ಮೇಲೆ ಮಾತನಾಡುವಾಗ ಸದನದಲ್ಲಿ Chief Secretaryಯವರು ಇರಬೇಕಾಗುತ್ತದೆ.

ಶ್ರೀ ಸಿದ್ದರಾಮಯ್ಯ: ವರ್ಷಕ್ಕೆ ಒಂದು ಸಾರಿ Governor's address ಅನ್ನು ಮಂಡಿಸುತ್ತೀರಿ. ನಿಮಗೆ ಈ ಬಗ್ಗೆ seriousness ಇಲ್ಲದೇ ಹೋದರೆ ಏನು ಮಾಡುವುದು ?

ಶ್ರೀ ಬಿ.ಎಸ್. ಯಡಿಯೂರಪ್ಪ: ನಾನು ಅವರೊಂದಿಗೆ ಮೀಟಿಂಗ್‌ನಲ್ಲಿದ್ದೆ, ಈಗ ಬರುತ್ತಾರೆ.

ಶ್ರೀ ಸಿದ್ದರಾಮಯ್ಯ: ನೀವು ಮೀಟಿಂಗ್ ಮಾಡಿ, ನಾವು ನಿಮ್ಮ ಮೀಟಿಂಗ್‌ಗೆ ಅಡ್ಡ ಬಂದಿದ್ದೆವಾ? ಪ್ರತಿ ದಿವಸ ಮಾಡಿ, ಗಂಟೆಗಟ್ಟಲೆ ಮಾಡಿ ನಮ್ಮದು ಏನೂ ತಕರಾರು ಇಲ್ಲ.

ಅಧ್ಯಕ್ಷರು: ಆಯಿತು, ಅವರನ್ನು ಕರೆಸುತ್ತಾರೆ.